# ವಿಹಾನ್ ನಟನಾ ವಿಹಾರ

‘ಕಾಲ್ ಕೇಜಿ ಪ್ರೀತಿ’ ಸಿನಿಮಾ ಮೂಲಕ ನಾಯಕನಾಗಿ ಪರಿಚಿತರಾದ ವಿಹಾನ್ ಈಗ ‘ಪಂಚತಂತ್ರ’ದ ಆಮೆ–ಮೊಲದ ರೇಸ್ ಫಲಿತಾಂಶಕ್ಕಾಗಿ ಕಾಯುತ್ತಿದ್ದಾರೆ. ನೆನಪಿನಲ್ಲಿ ಉಳಿಯುವಂಥ, ಆಪ್ತ ಪಾತ್ರಗಳಲ್ಲಿ ನಟಿಸಬೇಕು ಎನ್ನುವುದು ಅವರ ಇಂಗಿತ.

■ ಪದ್ಮನಾಭ ಭಟ್

‘ನಿನ್ನ ಧ್ವನಿ ಚೆನ್ನಾಗಿದೆ. ಬಾಡಿ ಲಾಂಗ್ವೇಜ್ ವಿಭಿನ್ನವಾಗಿದೆ. ಇದನ್ನು ಹೀಗೆಯೇ ಇಟ್ಕೊ. ಯಾವ್ಯಾವುದೋ ಹೀರೊಗಳನ್ನು ಅನುಕರಿಸಲು ಹೋಗಬೇಡ. ನೀನು ಹೇಗಿದ್ದೀಯೋ ಹಾಗೆಯೇ ಇರು.’

ನಿರ್ದೇಶಕ ಯೋಗರಾಜ ಭಟ್ಟರು ಎರಡು ವರ್ಷಗಳ ಹಿಂದೆ ಹೇಳಿದ ಕಿವಿಮಾತನ್ನು ಇಂದಿಗೂ ಮೂಲಮಂತ್ರವೆಂಬಂತೆ ಜಪಿಸುತ್ತಿದ್ದಾರೆ ವಿಹಾನ್.

ಬೆಂಗಳೂರಿನಲ್ಲಿಯೇ ಹುಟ್ಟಿ ಬೆಳೆದ ವಿಹಾನ್ ಓದಿದ್ದು ಎಂಬಿಎ. ‘ಚಿಕ್ಕಂದಿನಲ್ಲಿ ಎಲ್ಲ ಮಕ್ಕಳಂತೆಯೇ ನಾನೂ ಜಿಮ್ನಾಸ್ಟಿಕ್, ಈಜು, ಡಾನ್ಸ್ ಕ್ಲಾಸುಗಳಿಗೆಲ್ಲ ಹೋಗುತ್ತಿದ್ದೆ. ಆದರೆ ಮುಂದೆ ನಟನಾಗಬೇಕು, ಸಿನಿಮಾ ಹೀರೊ ಆಗಬೇಕು ಎಂದೆಲ್ಲ ಯಾವಾಗಲೂ ಅಂದುಕೊಂಡಿರಲಿಲ್ಲ. ನಾನು ಕಾಲೇಜಿನಲ್ಲಿ ಓದುತ್ತಿದ್ದಾಗ ನನ್ನನ್ನು ನೋಡಿದ ಕ್ರಿಶ್ ಜೋಷಿ, ಯೋಗರಾಜ ಭಟ್ಟರ ಬಳಿ ಕರೆದೊಯ್ದರು. ಅವರೇ ಒಂದು ಸಿನಿಮಾದಲ್ಲಿ ನನಗೆ ಸಣ್ಣ ಪಾತ್ರ ಕೊಡಿಸಿದರು. ಅಲ್ಲಿ ನನ್ನ ನಟನೆಯನ್ನು ನೋಡಿ ಮೆಚ್ಚಿ ‘ಕಾಲ್ ಕೇಜಿ ಪ್ರೀತಿ’ ಸಿನಿಮಾ ನಾಯಕನ ಪಾತ್ರದಲ್ಲಿ ನಟಿಸುವ ಅವಕಾಶ ನೀಡಿದರು’ ಎಂದು ನೆನಪಿಸಿಕೊಳ್ಳುತ್ತಾರೆ ವಿಹಾನ್.




‘ಕಾಲ್ ಕೇಜಿ ಪ್ರೀತಿ’ಯಲ್ಲಿ ತೋರಿದ ನಟನೆಯ ಕಾರಣಕ್ಕೆ ಯೋಗರಾಜ ಭಟ್ಟರ ‘ಪಂಚತಂತ್ರ’ ಸಿನಿಮಾದಲ್ಲಿ ನಟಿಸುವ ಅವಕಾಶ ಸಿಕ್ಕಿತು. ಭಟ್ಟರ ಸಿನಿಮಾದಲ್ಲಿಯೇ ನಟಿಸಬೇಕು ಎಂಬ ಕಾರಣಕ್ಕೆ ಅವರು ಮೊದಲ ಸಿನಿಮಾ ನಂತರ ಇನ್ಯಾವ ಸಿನಿಮಾವನ್ನೂ ಒಪ್ಪಿಕೊಂಡಿರಲಿಲ್ಲವಂತೆ.

‘ಪಂಚತಂತ್ರ ಸಿನಿಮಾದಲ್ಲಿ ನಟಿಸಲು ಅವಕಾಶ ಸಿಕ್ಕಿದ್ದು ನನ್ನ ಪಾಲಿಗೆ ಸಿಕ್ಕ ದೊಡ್ಡ ಅನುಭವಶಾಲೆ. ರಂಗಾಯಣ ರಘು ಅವರಂಥ ಘಟಾನುಘಟಿ ನಟರ ಎದುರಿಗೆ ತೆರೆಯ ಮೇಲೆ ನಟಿಸುವುದು ದೊಡ್ಡ ಸವಾಲು’ ಎನ್ನುವ ವಿಹಾನ್ ಈ ಚಿತ್ರದ ತನ್ನ ಪಾತ್ರದ ಬಗ್ಗೆಯೂ ತುಂಬ ಉತ್ಸುಕರಾಗಿ ಮಾತನಾಡುತ್ತಾರೆ.

‘ಯಾವುದೇ ನಟನಿಗೆ ಇಂಥ ಸಿನಿಮಾದಲ್ಲಿ ನಟಿಸಲು ಅವಕಾಶ ಸಿಗುವುದು ಒಂದು ಭಾಗ್ಯ. ಯಾಕೆಂದರೆ ಆ್ಯಕ್ಷನ್ ಸಿನಿಮಾಗಳಿರುತ್ತವೆ. ಲವ್, ರೊಮ್ಯಾಂಟಿಕ್ ಸಿನಿಮಾಗಳು, ಕಾಮಿಡಿ ಡ್ರಾಮಾ ಸಿನಿಮಾಗಳಿರುತ್ತವೆ. ಆದರೆ ಪಂಚತಂತ್ರ ಸಿನಿಮಾದಲ್ಲಿ ಫೈಟು, ಡಾನ್ಸು, ಕಾಮಿಡಿ, ಲವ್ ಎಲ್ಲವೂ ಇದೆ. ಎರಡು ತಲೆಮಾರುಗಳ ನಡುವಿನ ಕಿತ್ತಾಟ ಇದೆ, ಕೀಟಲೆ ಇದೆ. ರೇಸ್ ಇದೆ...’ ಎಂದು ಸಿನಿಮಾ ಕುರಿತು ವಿವರಿಸುತ್ತಾರೆ.

ವಿಹಾನ್‌ಗೆ ಬಿಲ್ಡಪ್ ಚಿತ್ರಗಳು, ಪಾತ್ರಗಳೆಂದರೆ ಇಷ್ಟವಿಲ್ಲ. ‘ಮಧ್ಯಮವರ್ಗದ, ಬಡವರ ಹುಡುಗನ ಪಾತ್ರದಲ್ಲಿ ಕಾಣಿಸಿಕೊಳ್ಳುವುದೇ ಇಷ್ಟ. ಅಂಥ ಪಾತ್ರಗಳೇ ಜನರಿಗೆ ಆಪ್ತವಾಗುವುದು. ಕೆಲವೇ ಸಿನಿಮಾ ಮಾಡಿದರೂ ಜನರಿಗೆ ಆಪ್ತ ಎನಿಸುವ ಪಾತ್ರಗಳಲ್ಲಿ ಕಾಣಿಸಿಕೊಳ್ಳಬೇಕು’ ಎನ್ನುವುದು ಅವರ ನಟನಾ ಪಾಲಿಸಿ.

‘ಪಂಚತಂತ್ರ’ ಸಿನಿಮಾ ಮಾರ್ಚ್ 29ರಂದು ಬಿಡುಗಡೆಯಾಗುತ್ತಿದೆ. ‘ಇಷ್ಟು ದಿನ ನಿರ್ದೇಶಕರನ್ನು ಮೆಚ್ಚಿಸಿದರೆ ಸಾಕು ಎಂದುಕೊಳ್ಳುತ್ತಿದ್ದೆ. ಅವರು ಮೆಚ್ಚಿಕೊಂಡಾಗಿದೆ. ಆದರೆ ಈಗ ಪ್ರೇಕ್ಷಕರು ಏನು ಹೇಳುತ್ತಾರೋ ಎಂಬ ಹೆದರಿಕೆ ಶುರುವಾಗಿದೆ. ಚಿತ್ರ ಬಿಡುಗಡೆಯಾದಾಗ ಜನರಿಗೆ ಇಷ್ಟವಾದರೆ ಸಾಕು ಎನಿಸುತ್ತಿದೆ’ ಎಂದು ಪುಲಕ– ಆತಂಕ ಎರಡೂ ಬೆರೆತ ಧ್ವನಿಯಲ್ಲಿ ಹೇಳುವ ಈ ಹುಡುಗನಲ್ಲಿ ಬೆಳೆಯುವ ಕನಸು, ಛಲ ಎರಡೂ ಇದೆ. ■